ಓಎಸ್ 125/2014

ಪಿಡಬ್ಲ್ಯೂ 1

**ಸಾಕ್ಷಿಯು ದಿಃ 27.06.2026 ರಂದು ನ್ಯಾಯಾಲಯದಲ್ಲಿ ಹಾಜರಿದ್ದು ಪ್ರಮಾಣ ವಚನ ಭೋಧಿಸಲಾಯಿತು.**

**ಪಾಟೀ ಸವಾಲು: 2(ಎ) ಯಿಂದ (ಸಿ) ಪ್ರತಿವಾದಿಗಳ ಪರ ವಕೀಲರಿಂದಃ ಮಧ್ಯಂತರ ಅರ್ಜಿಯ ಆದೇಶದ ಮೇರೆಗೆ**

ಸುಬ್ಬಪ್ಪ ರವರಿಗೆ ಯಾವ ಯಾವ ಆಸ್ತಿಗಳು ಇತ್ತು ಮತ್ತು ಅವುಗಳ ಸರ್ವೇ ನಂಬರ್ ಏನು ಎಂದು ನನಗೆ ಗೊತ್ತಿಲ್ಲ. ಸುಬ್ಬಪ್ಪ ರವರ ಒಟ್ಟು ಕುಟುಂಬಕ್ಕೆ ದಾವ ಐಟಂ ನಂಃ 2 ಮತ್ತು 3ನೇ ಆಸ್ತಿಗಳು ಮಾತ್ರ ಇದ್ದವು ಎಂದರೆ ಸರಿ. ಸದರಿ ಆಸ್ತಿಗಳಲ್ಲಿ ಸುಬ್ಬಪ್ಪ ಮತ್ತು ಒಟ್ಟು ಕುಟುಂಬದವರು ಜೋಳ ಮತ್ತು ಸೂರ್ಯಕಾಂತಿ ಬೆಳೆ ಬೆಳೆಯುತ್ತಿದ್ದರು. ಸದರಿ ಆಸ್ತಿಗಳು 3 ಎಕರೆ 8 ಗುಂಟೆ ವಿಸ್ತೀರ್ಣ ಇದ್ದವು. ಸದರಿ ಆಸ್ತಿಗಳಲ್ಲಿ ಸೂರ್ಯಕಾಂತಿ ಮತ್ತು ಜೋಳ ಬೆಳೆಯುತ್ತಿದ್ದೆವು ಎಂಬುದರ ಬಗ್ಗೆ ಪಹಣಿಗಳನ್ನು ಹಾಜರುಪಡಿಸಿರುತ್ತೇನೆ. ಸದರಿ ಆಸ್ತಿಗಳಲ್ಲಿ ಬೆಳೆಯುತ್ತಿದ್ದ ಬೆಳೆಗಳಿಂದ ಎಷ್ಟು ಆದಾಯ ಇತ್ತು ಎಂದರೆ ಸಾಕ್ಷಿಯು ಅದನ್ನು ನಾವೆಕೆ ಕೇಳಲಿ, ಬೆಳೆಯುತ್ತಿದ್ದವರು ನಮ್ಮ ದೊಡ್ಡಪ್ಪ ಸುಬ್ಬಪ್ಪ ಎಂದು ನುಡಿಯುತ್ತಾರೆ. ಸದರಿ ಅಸ್ತಿಗಳ ಬೆಳೆಯಿಂದ ಎಷ್ಟು ಆದಾಯ ಇತ್ತು ಎಂದು ನನಗೆ ಗೊತ್ತಿಲ್ಲ ಎಂದರೆ ಸರಿ. ಸದರಿ ಬೆಳೆಗಳನ್ನು ಊರಿನಲ್ಲಿ ಬಂದವರಿಗೆ ಅಥವಾ ಮಾರುಕಟ್ಟೆಯಲ್ಲಿ ಸುಬ್ಬಪ್ಪ ರವರು ಮಾರಾಟ ಮಾಡುತ್ತಿದ್ದರು. ಆ ರೀತಿ ಮಾರಾಟ ಮಾಡುವ ಬಗ್ಗೆ ನಾನು ರಶೀದಿಗಳನ್ನು ನೋಡಿಲ್ಲ. ಸದರಿ ಆಸ್ತಿಗಳಲ್ಲಿ ಯಾವುದೇ ಬೆಳೆ ಬೆಳೆಯತ್ತಿರಲಿಲ್ಲ ಮತ್ತು ಯಾವುದೇ ಆದಾಯ ಇರಲಿಲ್ಲ ಎಂದರೆ ಸರಿಯಲ್ಲ. ಸದರಿ ಆಸ್ತಿಗಳ ಆದಾಯವು ನಮ್ಮ ಒಟ್ಟು ಕುಟುಂಬದ ಊಟ ಬಟ್ಟೆ ಮತ್ತು ನಿರ್ವಹಣೆಗೆ ಸಾಕಾಗುತ್ತಿರಲಿಲ್ಲ ಎಂದರೆ ಸರಿಯಲ್ಲ. ಹಾಗಾಗಿ ಬೇರೆ ಆಸ್ತಿಗಳನ್ನು ಖರೀದಿಸಲು ಒಟ್ಟು ಕುಟುಂಬದ ಯಾವುದೇ ಆದಾಯ ಇರಲಿಲ್ಲ ಎಂದರೆ ಸರಿಯಲ್ಲ.

2. ದಾವ ಐಟಂ ನಂಃ 2 ಮತ್ತು 3ನೇ ಸ್ವತ್ತುಗಳಲ್ಲಿ ಮಾವು ಮತ್ತು ತೆಂಗಿನ ತೋಟ ಇತ್ತು. ಆ ಪೈಕಿ 2 ಎಕರೆಯಲ್ಲಿ ಮಾವಿನ ತೋಟ ಮತ್ತು 2 ಎಕರೆಯಲ್ಲಿ ತೆಂಗಿನ ತೋಟ ಇತ್ತು. ಮಾವಿನ ತೋಟದಲ್ಲಿ ಸುಮಾರು 150 ಮಾವಿನ ಗಿಡಗಳು ಹಾಗೂ ತೆಂಗಿನ ತೋಟದಲ್ಲಿ 200 ಗಿಡಗಳು ಇದ್ದವು. ತೆಂಗಿನ ತೋಟ ಮತ್ತು ಮಾವಿನ ತೋಟದಿಂದ ವರ್ಷಕ್ಕೆ 1 ರಿಂದ 1 ½ ಲಕ್ಷ ಆದಾಯ ಇತ್ತು. ಮಾವು ಮತ್ತು ತೆಂಗನ್ನು ಮಾರಾಟ ಮಾಡಿರುವುದರ ಬಗ್ಗೆ ನಮ್ಮ ಬಳಿ ರಶೀದಿಗಳು ಇಲ್ಲ, ದೊಡ್ಡವರು ಮಾರಾಟ ಮಾಡುತ್ತಿದ್ದರು. ಮಾವು ಮತ್ತು ತೆಂಗನ್ನು ಮಾರಾಟ ಮಾಡಿರುವುದು ನಾನು ನೋಡಿಲ್ಲ ಮತ್ತು ಸುಳ್ಳು ಸಾಕ್ಷ್ಯನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

3. ಕೊಂಗಳಪ್ಪ ರವರು ಎತ್ತಿನ ಗಾಡಿಯನ್ನು ಓಡಿಸುತ್ತಿದ್ದರು ಮತ್ತು ಸೀಮೆ ಎಣ್ಣೆ ಹಾಗೂ ಸೌದೆ ಡಿಪೋ ಇಟ್ಟುಕೊಂಡಿದ್ದರು ಎಂದರೆ ಸುಳ್ಳು. ಸದರಿ ವ್ಯಾಪಾರದ ಆದಾಯದಿಂದ ಕೊಂಗಳಪ್ಪ ರವರು ದಾವ ಐಟಂ ನಂಃ 1, 4, 5 ಮತ್ತು 6 ಹಾಗೂ ಮನೆ ಮತ್ತು ನಿವೇಶವನ್ನು ಖರೀದಿ ಮಾಡಿದ್ದರು ಎಂದರೆ ಸುಳ್ಳು. ಹಾಗಾಗಿ ದಾವ ಐಟಂ ನಂಃ 1, 4, 5, 6 ಹಾಗೂ ಮನೆ ಮತ್ತು ನಿವೇಶನ ಕೊಂಗಳಪ್ಪ ರವರ ಸ್ವಯಾರ್ಜಿತ ಆಸ್ತಿ ಎಂದರೆ ಸರಿಯಲ್ಲ. ಸದರಿ ಆಸ್ತಿಗಳನ್ನು ಖರೀದಿಸಲು ಯಾವುದೇ ಒಟ್ಟು ಕುಟುಂಬದ ಆದಾಯ ಇರಲಿಲ್ಲ ಮತ್ತು ಸ್ವಂತ ದುಡಿಮೆಯಿಂದ ಕೊಂಗಳಪ್ಪ ರವರು ಸದರಿ ಆಸ್ತಿಗಳನ್ನು ಖರೀದಿ ಮಾಡಿದ್ದಾರೆ ಎಂದರೆ ಸರಿಯಲ್ಲ. ಸದರಿ ಆಸ್ತಿಗಳನ್ನು ಖರೀದಿ ಮಾಡಿದಾಗ ಸುಬ್ಬಪ್ಪ ರವರು ಜೀವಂತ ಇದ್ದರು ಎಂದರೆ ಸಾಕ್ಷಿಯು ಮೃತಪಟ್ಟಿದ್ದರು ಎಂದು ನುಡಿಯುತ್ತಾರೆ. ಸದರಿ ಆಸ್ತಿಗಳನ್ನು ಕೊಂಗಳಪ್ಪ ರವರ ಸ್ವಂತ ದುಡಿಮೆಯಿಂದ ಖರೀದಿಸಿರುವುದರಿಂದ ಅವರ ಹೆಸರಿನಲ್ಲಿ ಖರೀದಿಸಲಾಗಿದೆ, ಒಟ್ಟು ಕುಟುಂಬದಿಂದ ಖರೀದಿಸಿದ್ದರೆ ಸುಬ್ಬಪ್ಪ ರವರ ಹೆಸರಿನಲ್ಲಿ ಖರೀದಿಸಲಾಗುತ್ತಿತ್ತು ಎಂದರೆ ಸರಿಯಲ್ಲ. ಕೊಂಗಳಪ್ಪ ರವರ ಸ್ವಯಾರ್ಜಿತ ಸ್ವತ್ತುಗಳನ್ನು ಲಪಟಾಯಿಸಲು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಒಟ್ಟು ಕುಟುಂಬದ ಆದಾಯ ಜೀವನದ ನಿರ್ವಹಣೆಗೆ ಸಾಕಾಗುತ್ತಿಲ್ಲವಾದರಿಂದ ಬೇರೆ ಆಸ್ತಿಗಳನ್ನು ಖರೀದಿಸುವ ಪ್ರಶ್ನೆಯೇ ಉದ್ಭಯಿಸುವುದಿಲ್ಲ ಎಂದರೆ ಸರಿಯಲ್ಲ. ಸುಬ್ಬಪ್ಪ ರವರು ಯಾವಾಗ ಮೃತಪಟ್ಟಿರುತ್ತಾರೆ ಎಂಬುವುದರ ಬಗ್ಗೆ ದಾಖಲೆಯನ್ನು

ಹಾಜರುಪಡಿಸಿರುವುದಿಲ್ಲ. ಸುಬ್ಬಪ್ಪ ರವರ ಜೀವಿತಾವಧಿಯಲ್ಲಿಯೇ ಕೊಂಗಳಪ್ಪ ರವರು ದಾವ ಐಟಂ ನಂಃ 1, 4, 5, 6 ಹಾಗೂ ಮನೆ ಮತ್ತು ನಿವೇಶನವನ್ನು ಖರೀದಿ ಮಾಡಿರುತ್ತಾರೆ ಎಂದರೆ ಸರಿಯಲ್ಲ.

**ಮರು ವಿಚಾರಣೆಃ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಸಾಕ್ಷಿಯ ಹೇಳಿಕೆಯನ್ನು ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸ ಇ ಎ ಒ

(ಶ್ರೀ. ದೀಪು ಎಂ.ಟಿ.)
ಪ್ರಧಾನ ಸಿವಿಲ್ ಜಡ್ಜ್ ಮತ್ತು ಜೆಎಂಎಫ್‌ಸಿ,
ಗುಂಡ್ಲುಪೇಟೆ